**ಸಾಕ್ಷಿಗೆ ದಿನಾಂಕಃ23-11-2024 ರಂದು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**:: ಪಾಟೀ ಸವಾಲು :: ವಾದಿ ಪರ ಶ್ರೀ. V.R.N ವಕೀಲರಿಂದ ::**

1. ಸುಕುಂದಮಕ್ಕಿ ಗ್ರಾಮದ ಸ ನಂ. 22-ಪಿ ರಲ್ಲಿರುವ 2 ಎಕರೆ 16 ಗುಂಟೆಯಲ್ಲಿ 1 ಎಕರೆ 26 ಗುಂಟೆ ಜಮೀನನ್ನು ಒಬ್ಬ ಕುಮಾರ ಸ್ವಾಮಿಯಿಂದ ಪಡೆದುಕೊಂಡಿರುತ್ತೇನೆ. 9 ನೇ ಪ್ರತಿವಾದಿ ಕುಮಾರ ಸ್ವಾಮಿಯವರ ಪತ್ನಿ ಎಂದರೆ ಸರಿ. ಪ್ರತಿವಾದಿ 10 ಮತ್ತು 11 ರವರು ಸದರಿ ಕುಮಾರಸ್ವಾಮಿರವರ ಮಕ್ಕಳು ಎಂದರೆ ಸರಿ. ಶಾಂತ ಲಕ್ಷ್ಮಮ್ಮ ವಾದಿಯ ತಾಯಿ ಎಂದರೆ ಸರಿ. ನಾನು ಸದರಿ ಆಸ್ತಿಯನ್ನು ಕುಮಾರಸ್ವಾಮಿ ರವರ ಮುಖಾಂತರ ಪಡೆದುಕೊಂಡಿರುತ್ತೇನೆ. ಸದರಿ ಕುಮಾರಸ್ವಾಮಿಗೆ ವಿಭಾಗದ ಮೂಲಕ ಆಸ್ತಿ ಬಂದಿರುತ್ತದೆ. ಯಾವ ಕಾಲಕ್ಕೆ ಬಂದಿರುತ್ತದೆ ಎಂದು ಹೇಳಲಾಗುವುದಿಲ್ಲ. ಕುಮಾರಸ್ವಾಮಿಗೆ ಆಗಿರುವ ವಿಭಾಗ ಪತ್ರಕ್ಕೆ ವಾದಿಯನ್ನು ಸೇರಿಸಿಕೊಂಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ವಿಭಾಗ ಪತ್ರಕ್ಕೆ ಯಾರು ಯಾರು ಸಹಿ ಮಾಡಿರುತ್ತಾರೆ ಎಂದು ನನಗೆ ಹೇಳಲಾಗಿರುವುದಿಲ್ಲ. ನಾನು ಕುಮಾರಸ್ವಾಮಿ ಇಂದ ವಾದಿಗೆ ಸೇರಿರುವ ಒಟ್ಟು ಕುಟುಂಬದ ಆಸ್ತಿಯನ್ನು ಖರೀದಿ ಮಾಡಿರುತ್ತೇನೆ ಎಂದರೆ ಸಾಕ್ಷಿಯು ಅವರ ಹಿಸ್ಸೆಗೆ ಬಂದಿರುವ ಆಸ್ತಿಯನ್ನು ಖರೀದಿ ಮಾಡಿರುತ್ತೇನೆಂದು ನುಡಿಯುತ್ತಾರೆ.

2. ಕುಮಾರಸ್ವಾಮಿಗೆ ಆಗಿರುವ ವಿಭಾಗದಲ್ಲಿ ವಾದಿಗೂ ಸಹ ಹಕ್ಕು ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ನಾನು ಖರೀದಿ ಮಾಡಿರುವ ಆಸ್ತಿಯಲ್ಲಿ ಕುಮಾರಸ್ವಾಮಿ ಮತ್ತು ವಾದಿ ಹಾಗೂ ಇತರೆ ಕುಟುಂಬದ ಸದಸ್ಯರಿಗೆ ಹಕ್ಕು ಇರುವ ಬಗ್ಗೆ ತಿಳಿದೂ ಸಹ ನಾನು ಬೇಕಂತಲೇ ಸದರಿ ಆಸ್ತಿಯನ್ನು ಖರೀದಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಸದುದ್ದೇಶದ(Bonafide) ಖರೀದಿಗಾರರು ಆಗಿರುವುದಿಲ್ಲ ಎಂದರೆ ಸರಿಯಲ್ಲ.

**:: ಮರು ವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಓ

ಸಹಿ/-

ಸಿ.ಜೆ ಮತ್ತು ಜೆ.ಎಂ.ಎಫ್.ಸಿ ನ್ಯಾಃ

ಶೃಂಗೇರಿ.